ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಶಾಲೆಗಳು		ಅನುದಾನಸಹಿತ	ಅನುದಾನ ರಹಿತ
ಅ) ಅ)	ಪೂರ್ವ ಪ್ರಾಥಮಿಕ ಶಾಲೆಗಳು (ನರ್ಸರಿ)	370	2005
ಆ)	ಕಿರಿಯ ಪ್ರಾಥಮಿಕ ಶಾಲೆಗಳು (1ರಿಂದ 4ರವರೆಗೆ)	429	1120
ಇ)	ಹಿರಿಯ ಪ್ರಾಥಮಿಕ ಶಾಲೆಗಳು (5 ರಿಂದ 7ಮಾಧ್ಯಮಿಕ)	1750	1766

ಆ)	92-93	93-94	94-95
	1743.46	2123.60	2374.29

ಬಸವಕಲ್ಯಾಣ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆ

864 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿರುವ ಶಿಕ್ಷಕರ ಕೊರತೆ ಎಷ್ಟು? ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಹೊಸದಾಗಿ ಸರ್ಕಾರದ ವತಿಯಿಂದ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ? ಹಾಗಿದ್ದಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಶಿಕ್ಷಕರ ಕೊರತೆ ಈ ಕೆಳಕಂಡಂತಿದೆ.

ಪ್ರಾಥಮಿಕ: ಮಾಧ್ಯಮಿಕ	ಪ್ರೌಢಶಾಲೆ	ಪದವಿ ಪೂರ್ವ ಕಾಲೇಜು
60	72	13

ಪ್ರಾಥಮಿಕ: ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆಯನ್ನು ಒಂದು ಹಂತವಾಗಿ ತುಂಬಲು ಕ್ರಮ ಕೈಗೊಂಡಿವೆ.

ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳನ್ನು ತುಂಬುವ ಬಗ್ಗೆಯೂ ಸಹ ಕ್ರಮ ಕೈಗೊಳ್ಳಲಾಗಿದೆ.

-ಇಲ್ಲ-

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು

868 - ಶ್ರೀ ಜಿ. ಬಸವಣ್ಣಪ್ಪ (ಹೊಳೆ ಹೊನ್ನೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಒಟ್ಟು ವೈದ್ಯಕೀಯ ಕಾಲೇಜುಗಳೆಷ್ಟು? (ಅವುಗಳ ಹೆಸರು ಮತ್ತು ವಿದ್ಯಾರ್ಥಿ ಪ್ರವೇಶ ಸಂಖ್ಯೆ ಪ್ರತಿ ಕಾಲೇಜಿನ ವಿವರ ಒದಗಿಸುವುದು)

2) ಈ ಕಾಲೇಜುಗಳಲ್ಲಿ ಮೆರಿಟ್ ವಿದ್ಯಾರ್ಥಿಗಳಿಗೆ ಮತ್ತು ಆಡಳಿತ ವರ್ಗಕ್ಕೆ ಇರುವ ಸಂಖ್ಯೆ ಎಷ್ಟು? (ಪ್ರತಿ ಕಾಲೇಜಿನ ವಿವರ ತಿಳಿಸುವುದು)

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

1) ಒಟ್ಟು 18 ವೈದ್ಯಕೀಯ ಕಾಲೇಜುಗಳು ಇವೆ. (ಪ್ರತ್ಯೇಕ ಪಟ್ಟಿ ಲಗತ್ತಿಸಿದೆ)

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಇರುವ ಮೆರಿಟ್ ಹಾಗೂ ಆಡಳಿತ ವರ್ಗಕ್ಕೆ ಇರುವ ಸೀಟುಗಳ ವಿವರ

ಕ್ರ ಸಂ	*ಕಾಲೇಜುಗಳ ಹೆಸರು*	*ಒಟ್ಟು ಸೀಟುಗಳು*	*ಮೆರಿಟ್ ಸೀಟುಗಳು*	*ಆಡಳಿತ ಸೀಟುಗಳು*
1)	ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು	245	245	-
2)	ಮೈಸೂರು ಮೆಡಿಕಲ್ ಕಾಲೇಜು, ಮೈಸೂರು	205	205	-
3)	ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ	147	147	-
4)	ಸರ್ಕಾರಿ ಮೆಡಿಕಲ್ ಕಾಲೇಜು, ಬಳ್ಳಾರಿ	140	140	-
5)	ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಮೈಸೂರು	200	100	30